2) ಲಾಲ್‌ಬಾಗ್ ಎಲ್ಲಾ ಪ್ರವೇಶ ದ್ವಾರಗಳಿಗೆ ಮೆ : ಸೈನಿಕ್ ಟ್ರೇ ಫಾರ್ಮಿಂಗ್ ಅಂಡ್ ವೆಲ್‌ಫೇರ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಕಾವಲು ಸಿಬ್ಬಂದಿ ನೇಮಿಸಲಾಗಿದೆ.

3) ಲಾಲ್‌ಬಾಗ್ ಉದ್ಯಾನವನದಲ್ಲಿ ಪೋಲೀಸ್ ಇಲಾಖೆ ವತಿಯಿಂದ ಪೋಲೀಸ್ ಗಸ್ತು ಏರ್ಪಡಿಸಲಾಗಿದೆ. ಹಾಗೂ ಹೊಯ್ಸಳ ವಾಹನ ಆಗಾಗ್ಗೆ ಗಸ್ತು ತಿರುಗುತ್ತಿದೆ.

ಈ) ಲಾಲ್‌ಬಾಗ್ ಉದ್ಯಾನವನದ ಪೂರ್ವ ದ್ವಾರದ ಬಳಿ ಕೆಂಗಲ್ ಹನುಮಂತಯ್ಯ ರಸ್ತೆಯ ತುದಿಗೆ ಹೊಂದಿಕೊಂಡಂತೆ ಡಾ|| ಎಂ.ಎಚ್ ಮರಿಗೌಡ ಸ್ವರ್ಣ ಭವನದ ಮುಂಭಾಗದಲ್ಲಿರುವ ಖಾಲಿ ಪ್ರದೇಶದಲ್ಲಿ ಸಾರ್ವಜನಿಕರ ವಾಹನ ನಿಲ್ದಾಣಕ್ಕೆ ವ್ಯವಸ್ಥೆ ಮಾಡಲಾಗಿದೆ.

ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಬಸ್ ನಿಲ್ದಾಣಗಳು

533 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಜಯನಗರ ವಿಧಾನ ಸಭಾ ಕ್ಷೇತ್ರದಲ್ಲಿರುವ ನಗರ ಸಾರಿಗೆ ಸಂಸ್ಥೆಯು ಬಸ್ ನಿಲ್ದಾಣಗಳನ್ನು ಅಭಿವೃದ್ಧಿಗೊಳಿಸಲು ಹಾಗೂ ಈ ಕ್ಷೇತ್ರದಲ್ಲಿ ಬಸ್ ಷೆಲ್ಟರ್ಸ್‌ಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

1. ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ಜಯನಗರ 4ನೇ ಬ್ಲಾಕ್‌ನಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಲಾಗಿದೆ. ಈ ಬಸ್ ನಿಲ್ದಾಣದ ವಿಸ್ತರಣೆಯನ್ನು ಬೆಂಗಳೂರು ಮಹಾನಗರ ಪಾಲಿಕೆಯಿಂದ ಹೆಚ್ಚಿನ ಸ್ಥಳವನ್ನು ಪಡೆದು ಅಭಿವೃದ್ಧಿಗೊಳಿಸಲಾಗುವುದು.

ಈ ವಿಧಾನ ಸಭಾ ಕ್ಷೇತ್ರಹಲ್ಲಿ ಒಟ್ಟು 102 ಬಸ್ ಷೆಲ್ಟರ್‌ಗಳಿರುತ್ತವೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಒಂದೇ ಮಾದರಿಯ ಬಸ್ ಷೆಲ್ಟರ್‌ಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ ನಿರ್ಮಿಸಲು ಯೋಜನೆ ಹಮ್ಮಿಕೊಳ್ಳಲಾಗಿದೆ.

ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಪ್ರವೇಶ ಶುಲ್ಕ

534 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಲಾಲ್‌ಬಾಗ್ ಉದ್ಯಾನವನಕ್ಕೆ ಪ್ರವೇಶ ಶುಲ್ಕವನ್ನು ವಿಧಿಸಲಾಗಿದೆಯೇ

ಆ) ಹಾಗಿದ್ದಲ್ಲಿ ದೊಡ್ಡವರಿಗೆ ಹಾಗೂ ಮಕ್ಕಳಿಗೆ ವಿಧಿಸಲಾದ ಪ್ರವೇಶ ಶುಲ್ಕ ಎಷ್ಟು?